ದಿನಾಂಕಃ 01.04.2017 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಶ್ರೀ ಎಸ್‌ಎನ್ ವಕೀಲರಿಂದಃ

ಸರ್ವೇ ನಂ.254 ಜಮೀನಿನಲ್ಲಿ ಎಷ್ಟು ಪೋಡಾಗಿದೆ ಎನ್ನುವುದು ನನಗೆ ಗೊತ್ತಿಲ್ಲ. ಸರ್ವೇ ನಂ.254 ರಲ್ಲಿ 3 ಪೋಡುಗಳಾಗಿರುವ ವಿಚಾರ ನನಗೆ ಗೊತ್ತಿಲ್ಲ. ನನಗೆ ತೋರಿಸಿದ ಕೈಬರಹದ ಪಹಣಿ ಪತ್ರಿಕೆಯಾದ ಸರ್ವೇ ನಂ.254/3 ರಲ್ಲಿನ 9 ಗುಂಟೆ ಜಮೀನು ಮುಳುಗಡೆ ಆಗಿದೆ ಎಂದರೆ ಸಾಕ್ಷಿಯು ದಾಖಲಾತಿ ಪ್ರಕಾರ ಮುಳುಗಡೆಯಾಗಿರುತ್ತದೆ ಎಂದು ನುಡಿದಿರುತ್ತಾರೆ. ಸದರಿ ದಾಖಲಾತಿಯನ್ನು ನಿಡಿ-5 ಎಂದು ಗುರುತಿಸಲಾಯಿತು. ನನಗೆ ತೋರಿಸಿದ ಸರ್ವೇ ನಂ.254/2 ಮತ್ತು ಸರ್ವೇ ನಂ.254/1 ಜಮೀನಿನಲ್ಲಿ 1ನೇ ಪ್ರತಿವಾದಿಗೆ ಸೇರಿದ ಜಮೀನುಗಳು ಇವೆ ಎಂದರೆ ಸರಿ. ಸದರಿ ದಾಖಲಾತಿಗಳನ್ನು ಸಾಕ್ಷಿಯು ಒಪ್ಪಿಕೊಂಡಿದ್ದರಿಂದ ನಿಡಿ-6 ಮತ್ತು 7 ಎಂದು ಗುರುತಿಸಲಾಯಿತು. ಸರ್ವೇ ನಂ.253/3 ರ 22 ಗುಂಟೆ ಜಮೀನು ಕೆಆರ್‌ಎಸ್ ಅಣೆಕಟ್ಟೆಯ ಹಿನ್ನೀರಿನಲ್ಲಿ ಮುಳುಗಡೆಯಾಗಿದೆ ಎಂದರೆ ಸಾಕ್ಷಿಯು ತನಗೆ ತೋರಿಸಿದ ಪಹಣಿ ಪತ್ರಿಕೆಯ ಪ್ರಕಾರ ಮುಳುಗಡೆಯಾಗಿದೆ ಎಂದು ನುಡಿಯುತ್ತಾರೆ. ಸದರಿ ದಾಖಲಾತಿಯನ್ನು ನಿಡಿ-8 ಎಂದು ಗುರುತಿಸಲಾಯಿತು. ಅದೇ ರೀತಿ ತಾನು ಸ್ಥಳಕ್ಕೆ ಹೋಗಿಲ್ಲ ಎಂದು ಮುಂದುವರೆದು ನುಡಿಯುತ್ತಾರೆ. ಈ ಹಿಂದೆ ಓಣಿ ದಾರಿ ಅಂತಾ ಇರುವುದನ್ನು ಸರ್ವೇ ನಂ. 280 ಅಂತಾ ನಮೂದು ಮಾಡಿದ್ದಾರೆ. ಸರ್ವೇ ನಂ.251 ರ ಜಮೀನು ವಾದಿಯ ತಮ್ಮನಾದ ಕೆ.ಟಿ.ಮಾಯಣ್ಣ ಇವರಿಗೆ ಸೇರಿರುವ ಬಗ್ಗೆ ನನಗೆ ಗೊತ್ತಿಲ್ಲ. ಸರ್ವೇ ನಂ. 253 ಮತ್ತು 254 ರ ಯಾವ ಪೋಡುಗಳಲ್ಲಿ ದಾರಿ ಹಾದುಹೋಗಿದೆ ಎಂದು ಹೇಳಲು ಆಗುವುದಿಲ್ಲ. ನಿಪಿ-19ಬಿ ನಲ್ಲಿ ತೋರಿಸಿದ ದಾರಿ ಸರ್ವೇ ನಂ.251 ರಲ್ಲಿ ಎಡಕ್ಕೆ ಒಂಟಿಚುಕ್ಕಿ ದಾರಿಯಾಗಿ ತೋರಿಸಿದೆ ಎಂದರೆ ಸರಿ. ಸರ್ವೇ ನಂ.230 ವಾದಿಯ ಅಣ್ಣನಾದ ಕೆ.ಟಿ.ಶಂಕರಪ್ಪ ಇವರ ಹೆಸರಿನಲ್ಲಿ ಇರುತ್ತದೆ. ಸರ್ವೇ ನಂ.230 ರಲ್ಲಿ ಎಂ.ಗಿರಿಜಾ ಕೋಂ ವಿ.ಮುರಳಿ ಇವರ ಹೆಸರಿನಲ್ಲಿ ಜಮೀನು ಇದೆ ಎಂದರೆ ಸರಿ. ನಾನು ನಕಾಶೆಯನ್ನು ನೋಡಿ ದಾರಿ ಇದೆ ಎಂದು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ಅದೇ ರೀತಿ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿ.

ನಾನು ಸ್ಥಳಕ್ಕೆ ಹೋಗದೇ ಇರುವುದರಿಂದ ಯಾವ ಜಮೀನುಗಳಲ್ಲಿ ದಾರಿ ಇದೆ ಎಂದು ಹೇಳಲು ಆಗುವುದಿಲ್ಲ ಎಂದರೆ ಸರಿ. ಸದರಿ ನಾನು ಹೇಳಿದ ದಾರಿ ಮುಚ್ಚಿ ಹೋಗಿ ಜಮೀನು ಮಾಡುತ್ತಿದ್ದಾರೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ಸರ್ವೇ ನಂ.248 ರ ಜಮೀನು ಪಹಣಿ ಪ್ರಕಾರ ಮುಳುಗಡೆಯಾಗಿದೆ ಎಂದರೆ ಸರಿ. ಸರ್ವೇ ನಂ.256 ಜಮೀನಿನ ಮೇಲೆ ನಕಾಶೆಯ ಪ್ರಕಾರ ದಾರಿ ಇಲ್ಲ ಎಂದರೆ ಸರಿ.

2ನೇ ಪ್ರತಿವಾದಿ ಇದೇ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರುವಿಚಾರಣೆಃ ಇಲ್ಲ.

ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಒಪ್ಪಿದೆ,

(ರಮೇಶ್ ಎಸ್.ಗಾಣಿಗೇರ)
ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು
ಜೆಎಂಎಫ್‌ಸಿ, ಕೆ.ಆರ್.ನಗರ